KAMD720004752026

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ನ್ಯಾಯಿಕ ದಂಡಾಧಿಕಾರಿ
ರವರ ನ್ಯಾಯಾಲಯ , ಶ್ರೀರಂಗಪಟ್ಟಣ.

**ಸಿ.ಸಿ.ಃ 237/2026**

| **ಪಿರ್ಯಾದು** | **ಆರೋಪಿತ** |
|---|---|
| ಅರಕೆರೆ ಪೊಲೀಸ್ ಠಾಣೆ | ಪುಟ್ಟರಾಜು ಬಿನ್ ವೆಂಕಟೇಶ,<br>ವಯಸ್ಸು 34 ವರ್ಷ,<br>ವಾಸಃ ಹಳ್ಳದ ಮನುಗನಹಳ್ಳಿ ಗ್ರಾಮ,<br>ಹೆಚ್.ಡಿ.ಕೋಟೆ ತಾಲೂಕು,<br>ಮೈಸೂರು ಜಿಲ್ಲೆ |

**ಃಃ ಆರೋಪಣೆ ಃಃ**

ಶ್ರೀ ಉಮೇಶ ಎಂ.ಪಿ. ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಜೆ.ಎಂ.ಎಫ್.ಸಿ, ಶ್ರೀರಂಗಪಟ್ಟಣ ಆದ ನಾನು ಆರೋಪಿತರಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗೆ ಗುರಿಪಡಿಸುವುದೇನೆಂದರೆಃ

ದಿನಾಂಕಃ 21.01.2026 ರಂದು ಬೆಳಿಗ್ಗೆ 10 .00 ಗಂಟೆ ಸಮಯದಲ್ಲಿ ಅರಕೆರೆ ಪೊಲೀಸ್ ಠಾಣಾ ಸರಹದ್ದಿನ ಬೊಂತಗಹಳ್ಳಿ ಗೇಟ್ ಬಳಿ ಹಾದುಹೋಗಿರುವ ಚಿಕ್ಕ ಅಂಕನಹಳ್ಳಿ -ಬೊಂತಗಹಳ್ಳಿ ರಸ್ತೆಯಲ್ಲಿ ದೋ.ಸಾಕ್ಷಿ-2 ರವರು ರಸ್ತೆಯ ಎಡಭಾಗದಲ್ಲಿ ನಡೆದುಕೊಂಡು ಬರುತ್ತಿದ್ದಾಗ ಆರೋಪಿಯಾದ ನೀವು ಹೊಂಡಾ ಯೂನಿಕಾರ್ನ್ ಬೈಕ್ ಸಂಃಕೆಎ-09-ಜೆವೈ-2445 ರನ್ನು ಚಿಕ್ಕ ಅಂಕನಹಳ್ಳಿ ಕಡೆಯಿಂದ ಬೊಂತಗಹಳ್ಳಿ ಕಡೆಗಾದಂತೆ ಅತೀ ವೇಗ ಅಜಾಗರೂಕತೆಯಿಂದ ಚಾಲನೆ ಮಾಡಿದ್ದು ಭಾರತೀಯ ನ್ಯಾಯ ಸಂಹಿತೆ 281 ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

2. ಅದೇ ದಿನಾಂಕ , ಅದೇ ಸ್ಥಳದಲ್ಲಿ ಆರೋಪಿಯಾದ ನೀವು ಹೊಂಡಾ ಯೂನಿಕಾರ್ನ್ ಬೈಕ್ ಸಂಃಕೆಎ-09-ಜೆವೈ-2445 ರನ್ನು ಚಿಕ್ಕ ಅಂಕನಹಳ್ಳಿ ಕಡೆಯಿಂದ

KAMD720004752026

ಬೊಂತಗಹಳ್ಳಿ ಕಡೆಗಾದಂತೆ  ಅತೀ ವೇಗ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ದೋ.ಸಾಕ್ಷಿ-2 ರವರಿಗೆ ರಭಸವಾಗಿ ಡಿಕ್ಕಿ ಮಾಡಿದ ಪರಿಣಾಮ ದೋ.ಸಾಕ್ಷಿ-2 ರವರ ಬಲಕಾಲಿನ ಮಂಡಿಗೆ  ಸಾಮಾನ್ಯ  ಸ್ವರೂಪದ ಗಾಯಗಳಾಗಿರುವ ಪರಿಣಾಮ ಭಾರತೀಯ ನ್ಯಾಯ ಸಂಹಿತೆ 125(ಎ) ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

3. ಅದೇ ದಿನಾಂಕ , ಅದೇ ಸ್ಥಳದಲ್ಲಿಆರೋಪಿಯಾದ ನೀವು ಹೊಂಡಾ ಯೂನಿಕಾರ್ನ್ ಬೈಕ್ ಸಂಃಕೆಎ-09-ಜೆವೈ-2445 ರನ್ನು ಚಿಕ್ಕ ಅಂಕನಹಳ್ಳಿ ಕಡೆಯಿಂದ ಬೊಂತಗಹಳ್ಳಿ ಕಡೆಗಾದಂತೆ  ಅತೀ ವೇಗ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ದೋ.ಸಾಕ್ಷಿ-2 ರವರಿಗೆ ರಭಸವಾಗಿ ಡಿಕ್ಕಿ ಮಾಡಿದ ಪರಿಣಾಮ ದೋ.ಸಾಕ್ಷಿ-2 ರವರ ಬಲಮೊಣಕಾಲಿಗೆ  ತೀವ್ರ ಸ್ವರೂಪದ ಗಾಯಗಳಾಗಿರುವ ಪರಿಣಾಮ ಭಾರತೀಯ ನ್ಯಾಯ ಸಂಹಿತೆ  125(ಬಿ) ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

ದಿನಾಂಕಃ 03 ನೇ ಆಗಸ್ಟ್ 2026

(ಮೇಲ್ಕಂಡ ಆಪಾದನೆಯನ್ನು ಆರೋಪಿತರಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನು ನೀಡಿದ ಉತ್ತರವನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು ಎಂದು ಈ ಮೂಲಕ ದೃಢೀಕರಿಸಲಾಗಿದೆ)

(ಉಮೇಶ.ಎಂ.ಪಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ,ಶ್ರೀರಂಗಪಟ್ಟಣ.

ಆರೋಪಿ ಸಹಿಃ

KAMD720004752026

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ನ್ಯಾಯಿಕ ದಂಡಾಧಿಕಾರಿ
ರವರ ನ್ಯಾಯಾಲಯ , ಶ್ರೀರಂಗಪಟ್ಟಣ.

**ಸಿ.ಸಿ.ಃ 237/2026**

| **ಪಿರ್ಯಾದು** | **ಆರೋಪಿತ** |
| --- | --- |
| ಅರಕೆರೆ<br>ಪೊಲೀಸ್ ಠಾಣೆ | ಪುಟ್ಟರಾಜು ಬಿನ್ ವೆಂಕಟೇಶ,<br>ವಯಸ್ಸು 34 ವರ್ಷ,<br>ವಾಸಃ ಹಳ್ಳದ ಮನುಗನಹಳ್ಳಿ ಗ್ರಾಮ,<br>ಹೆಚ್.ಡಿ.ಕೋಟೆ ತಾಲೂಕು,<br>ಮೈಸೂರು ಜಿಲ್ಲೆ |

ಃಃ ಆರೋಪಿ ಹೇಳಿಕೆ ಃಃ

ಪ್ರಶ್ನೆಃ ಆಪಾದನೆಯನ್ನು ಕನ್ನಡದಲ್ಲಿ ಓದಿ ಹೇಳಲಾಗಿದ್ದು ಅರ್ಥವಾಯಿತಾ?

ಉತ್ತರಃ

ಪ್ರಶ್ನೆಃ ಆಪಾದನೆಯನ್ನು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯಾಗಬೇಕೆ?

ಉತ್ತರಃ

ದಿನಾಂಕಃ 03 ನೇ ಆಗಸ್ಟ್ 2026

(ಮೇಲ್ಕಂಡ ಆಪಾದನೆಯನ್ನು ಆರೋಪಿತರಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನು ನೀಡಿದ ಉತ್ತರವನ್ನು ಯಥವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು ಎಂದು ಈ ಮೂಲಕ ದೃಢೀಕರಿಸಲಾಗಿದೆ)

(ಉಮೇಶ.ಎಂ.ಪಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ
ನ್ಯಾಯಾಲಯ,ಶ್ರೀರಂಗಪಟ್ಟಣ.

ಆರೋಪಿ ಸಹಿಃ